
ಇಂಗ್ಲೆಂಡಿನ ಸದಾ ಮೋಡ ಮುಚ್ಚಿಕೊಂಡ, ನೀರಸ ವಾತಾವರಣವನ್ನು ಬಿಟ್ಟು ರೋಮಿನ ನಿರಭ್ರ ಆಗಸ ಮತ್ತು ಚಾರಿತ್ರಿಕ ವೈಭವಗಳ ನಡುವೆ ಬೀಸುವ ರೊಮ್ಯಾಂಟಿಕ್ ಗಾಳಿಗೆ ಹಂಬಲಿಸಿದ ಜಾನ್ ಕೀಟ್ಸ್ 1820ರ ನವೆಂಬರ್ ತಿಂಗಳಿನಲ್ಲಿ ರೋಮಿಗೆ ಬಂದಿಳಿಯುತ್ತಾನೆ. ಅಷ್ಟೊತ್ತಿಗೆ ತನ್ನ ಕವಿತೆಗಳಿಗೆ ಬಂದ ತೀವ್ರವಾದ ವಿಮರ್ಶೆಗಳ ಜೊತೆಗೆ ಕಾಡುತ್ತಿರುವ ಕಾಯಿಲೆಯೂ ಸೇರಿ ಕುಸಿಯುತ್ತಿರುವ ರೋಮಿನ ಅವಶೇಷಗಳಂತೆ ದೈಹಿಕವಾಗಿಯೂ ಜೀರ್ಣವಾಗಿದ್ದ.

ಕೀಟ್ಸ್ ಪ್ರವಾಸಿಯಾಗಿರಲಿಲ್ಲ, ಯಾತ್ರಿಯೂ ಆಗಿರಲಿಲ್ಲ. ತನ್ನ ಪ್ರೇಯಸಿ ಫ್ಯಾನಿಯನ್ನು ಬಿಟ್ಟು ಬಂದಿದ್ದ ಅವನಿಗೆ ಸುಮ್ಮನಿರುವುದಷ್ಟೇ ಬೇಕಿತ್ತು. ಕೇವಲ 25ರ ಯುವಕ, ಕೀಟ್ಸ್‌ನ ಶ್ವಾಸಕೋಶಗಳಾಗಲೇ ಕ್ಷಯರೋಗದ ಮುಷ್ಟಿಯಲ್ಲಿ ಬಂಧಿಯಾಗಿ ಪ್ರತಿ ಕೆಮ್ಮು, ಪ್ರತಿ ಉಗುಳು ಅವನ ಕಾವ್ಯದ ಪ್ರಮುಖ ವಿಷಯವಾದ ಯೌವನದ ನಶ್ವರತೆಯ ಕುರಿತು ಹಾಡತೊಡಗಿತ್ತು. ಡಾಕ್ಟರುಗಳು ಇಂಗ್ಲೆಂಡಿನ ಕಡುಚಳಿ ಬಿಟ್ಟು ಬೆಚ್ಚಗಿನ ಜಾಗ ಇಟಲಿಯೇ ಪರಿಹಾರವೆಂದಿದ್ದರು. ಆದರೆ ರೋಮು ಕವಿಗೆ ಸಂಜೀವಿನಿ ಆಗದೇ ನಿಧಾನವಾಗಿ, ಕಲಾತ್ಮಕವಾಗಿ ವಿದಾಯ ಹೇಳಿತ್ತು ಅಷ್ಟೆ.


ಕೀಟ್ಸ್ ಮುಖದ ಉಬ್ಬುಚಿತ್ರ

ಸ್ಪ್ಯಾನಿಷ್ ಮೆಟ್ಟಿಲುಗಳ ಪಕ್ಕದಲ್ಲೇ ಒಂದು ಪುಟ್ಟದಾದ ಅಪಾರ್ಟ್ಮೆಂಟಿನಲ್ಲಿ ಮಿತ್ರ ಜೋಸೆಫ್ ಸೆವರ್ನ್ ಜೊತೆಗೆ ಮಹಾಕವಿಯ ವಾಸವಿತ್ತು. ಒಂದು ಕಾಲದಲ್ಲಿ ತನ್ನ ಬರಹವನ್ನು ಇನ್ನಷ್ಟು ಸುಂದರವಾಗಿಸಲು ದೇವತೆಗಳನ್ನು, ಕಲಾತ್ಮಕವಾದ ಗ್ರೀಸಿನ ಹೂದಾನಿಗಳನ್ನು ಆಹ್ವಾನಿಸುತ್ತಿದ್ದ ಕವಿ, ಆ ಸಮಯದಲ್ಲಿ ಒಂದೊಂದು ಉಸಿರಿಗೂ ಚಡಪಡಿಸುತ್ತಿದ್ದ. ನೆಮ್ಮದಿಯಿಂದ ನಿದ್ರಿಸಲು, ಎಲ್ಲವನ್ನು ಮರೆಯಲು ಹಾತೊರೆದಿದ್ದ. ದಿನಕ್ಕ ಹತ್ತಾರು ಬಾರಿ ಕೇಳುವ ಚರ್ಚಿನ ಗಂಟೆಗಳ ದನಿ, ಮರಣ ಗಂಟೆಯಂತೆ ಭಾಸವಾಗಿ ದಣಿದಿದ್ದ. ಒಂದು ಕಾಲದಲ್ಲಿ ಸಾಮ್ರಾಜ್ಯದ ಕೇಂದ್ರಬಿಂದುವಾಗಿ ಈಗ ಮರೆತ ಇತಿಹಾಸದ ಪುಟಗಳಂತಿರುವ ಪುರಾತನ ನಗರ ರೋಮಿನಲ್ಲಿ ಕವಿ ತನ್ನನ್ನು ತಾನೇ ಕಾಣುತ್ತಿದ್ದ. 'ನನ್ನ ಮೇಲೆ ಡೇಸಿ ಹೂಗಳು ಅರಳುತ್ತಿರುವಂತೆ ಭಾಸವಾಗುತ್ತಿದೆ' ಅಂದಿದ್ದ ಕೀಟ್ಸ್ ಮಹಾಕವಿಗೆ ಆಗಲೇ ಮಣ್ಣಿನಡಿಯಲ್ಲಿ ಆ ಹೂದಳಗಳ ಮರ್ಮರ ಮಾರ್ದನಿಸಿರಬೇಕು.

ಮರಣದ ನಂತರ ಸಮಾಧಿಯ ಮೇಲೆ ತನ್ನ ಹೆಸರು ಬರೆಯಕೂಡದೆಂದು ಕಟ್ಟುನಿಟ್ಟು ಮಾಡಿದ್ದ ಕವಿ, 'ಇಲ್ಲಿ ವಿರಮಿಸಿದವನ ಹೆಸರನ್ನು ನೀರಿನಲ್ಲಿ ಬರೆಯಲಾಗಿದೆ.' ಎಂದಷ್ಟೇ ಬರೆಯಲು ಹೇಳಿದ್ದ. ಆ ಸಾಲಿನಲ್ಲಿ ಶರಣಾದ ಭಾವ. ವಿನೀತ ಭಾವ. ಆದರೂ ನೀರಿನಲ್ಲಿ ಬಿದ್ದ ಬೀಜವೊಂದು ಮತ್ತೆ ಚಿಗುರೊಡೆಯುವ ಧಾರ್ಷ್ಟ್ಯ. ಅದಕ್ಕೆ ಶತಮಾನಗಳಾಚೆಗೆ, ದೇಶ ಖಂಡಗಳನ್ನು ದಾಟಿ ಹಬ್ಬುವ ಬಯಕೆ. ಆದರೆ ಕವಿಯ ಅಭಿಮಾನಿಗಳಿಗೆ ಈ ಸಾಲು ಇಷ್ಟವಾಗಲಿಲ್ಲ. ನಂತರದಲ್ಲಿ ಆ ಸಾಹಿತಿ ಮಿತ್ರರೆಲ್ಲ ಸೇರಿ ತನ್ನ ಬರಹದ ಟೀಕೆಗಳಿಂದ ಬೇಸರಗೊಂಡ ಕವಿ ಹೀಗೆ ಬರೆಯಲು ಹೇಳಿದ್ದೆಂದು ಅದಕ್ಕೊಂದು ಪುಟ್ಟ ಟಿಪ್ಪಣಿಯನ್ನು ಸೇರಿಸುತ್ತಾರೆ. ಮುಂದೊಂದು ದಿನ ಬಂದ ಆಸ್ಕರ್ ವೈಲ್ಡ್, ಮಹಾಕವಿಯ ಸಮಾಧಿಗೆ ನಮಿಸಿ, ಇದೇ ರೋಮಿನ ಪುಣ್ಯಭೂಮಿ ಅನ್ನುತ್ತಾನೆ. ಕವಿಯ ಹೆಸರನ್ನು ನೀರಿನಲ್ಲಿ ಬರೆದರೂ ನಮ್ಮ ಕಣ್ಣೀರು ಅದನ್ನು ಸದಾ ಹಸಿರಾಗಿಡುತ್ತದೆಯೆಂದು ಉದ್ಗರಿಸುತ್ತಾನೆ.



ಇಂದಿಗೂ ರೋಮಿನ ತೆಸ್ಟಾಚಿಯೊದಲ್ಲಿರುವ ಮಹಾಕವಿಯ ಚಿರನಿದ್ರೆಯ ತಾಣ ಸಾಹಿತ್ಯಪ್ರಿಯರಿಗೆ ಅಚ್ಚುಮೆಚ್ಚು. ಅಮೃತಶಿಲೆಯ ಸಮಾಧಿಯ ಸುತ್ತಲೂ ನೀಳವಾದ ಸೈಪ್ರಸ್ ಮರಗಳು ತಲೆಬಾಗಿವೆ. ಬೆಕ್ಕುಗಳು ನೆರಳಿನಂತೆ ಸುಳಿದಾಡುತ್ತವೆ. ಐವಿ ಬಳ್ಳಿಯೊಂದು ಮಮತೆಯಿಂದ ಸುತ್ತುಗಟ್ಟಿದೆ. ವೈಭವದ ಕುರುಹುಗಳಿಲ್ಲದೇ ಕೇವಲ ಶಾಂತಿ ನೆಲೆಸಿದೆ, ಕವಿತೆಗಳೊಂದಿಗೆ. ಕವಿ ರೋಮಿನಲ್ಲಿ ಗುಣಮುಖನಾಗದೇ ಇರಬಹುದು. ಆದರೆ ಬೆಚ್ಚನೆಯ ಸಾಂತ್ವನವಂತೂ ಸಿಕ್ಕಿದ್ದು ನಿಜ.

ಇಂಗ್ಲಿಷಿನ ಎರಡು ಅಪ್ರತಿಮ ರೊಮ್ಯಾಂಟಿಕ್ ಕವಿಗಳಾದ ಕೀಟ್ಸ್ ಮತ್ತು ಶೆಲ್ಲಿ ಇಬ್ಬರ ಬದುಕು ಒಂದು ವರ್ಷದ ಅಂತರದಲ್ಲಿ, ತುಂಬು ತಾರುಣ್ಯದಲ್ಲಿ ರೋಮಿನಲ್ಲೇ ಅಂತ್ಯ ಆಗಿರುವುದೊಂದು ದುರಂತ. ಆದ್ದರಿಂದಲೇ ಈಗ ಆ ಪುಟ್ಟ ಮನೆ ಕೀಟ್ಸ್ ಶೆಲ್ಲಿ ಮ್ಯೂಸಿಯಂ ಆಗಿ ಸಾಹಿತ್ಯಪ್ರಿಯರನ್ನು ಆಕರ್ಷಿಸುತ್ತದೆ. ಶೆಲ್ಲಿಯ ಕೆಲವು ಸ್ಮರಣಿಕೆಗಳನ್ನು ಕೂಡ ಇದೇ ಮನೆಯಲ್ಲಿ ಇಡಲಾಗಿದೆ. ಮತ್ತೋರ್ವ ಪ್ರಸಿದ್ಧ ರೊಮ್ಯಾಂಟಿಕ್ ಕವಿ ಇಟಲಿಯ ಮೂಲದ ಬೈರನ್ ನೆನಪಿಗಾಗಿ ಒಂದು ಕೋಣೆಯನ್ನು ಬಿಟ್ಟು ಕೊಡಲಾಗಿದೆ.

ಈ ಮ್ಯೂಸಿಯಂನಲ್ಲಿರುವ ಅಚ್ಚುಕಟ್ಟಾದ ಗ್ರಂಥಾಲಯ ಕೀಟ್ಸ್, ಶೆಲ್ಲಿ ಮತ್ತು ಬೈರನ್ನರ ಅನೇಕ ಕೃತಿಗಳಿಂದ ಗಮನಸೆಳೆಯುತ್ತದೆ. ಮೊದಲು ಸಿಗುವ ಕೋಣೆಯಲ್ಲಿ ಕವಿಯ ಮುಖದ ಉಬ್ಬುಚಿತ್ರವಿದೆ. 'ದಯವಿಟ್ಟು ಮುಟ್ಟಿ' ಎನ್ನುವ ಸೂಚನೆಯನ್ನು ಪಾಲಿಸಿದಾಗ ಕಣ್ಣಿಲ್ಲದವರು ಆನೆಯನ್ನು ಅಳೆಯುವಂತೆ ಅನ್ನಿಸುತ್ತದೆ. ಕಡೆಯ ದಿನಗಳಲ್ಲಿ ಕವಿಯ ಶುಶ್ರೂಷೆ ಮಾಡಿದ ಪರಮ ಮಿತ್ರನಾದ ಸೆವರ್ನ್ ಬರೆದ ಪತ್ರಗಳು, ಭಾವಚಿತ್ರಗಳು ಇಡೀ ಮನೆಯನ್ನು ಅಲಂಕರಿಸಿವೆ.

ಮುಂದಿನ ಹಾಲಿನಲ್ಲಿ ಕವಿಯ ಪ್ರತಿಮೆಯೊಂದನ್ನು ಕಟ್ಟೆಯ ಮೇಲೆ ಅವನಷ್ಟೇ ಎತ್ತರದಲ್ಲಿ ಅಂದರೆ ಐದಡಿ ಒಂದು ಇಂಚಿನಳತೆಯಲ್ಲಿ


ಕೀಟ್ಸ್ ಕೊನೆಯುಸಿರೆಳೆದ ಕೋಣೆ

ನಿಲ್ಲಿಸಲಾಗಿದೆ. ಹಿಂದಿರುವ ಕೋಣೆಯಲ್ಲಿ ಎರಡು ಕುರ್ಚಿಗಳು ಒಂದರ ಮುಂದೆ ಇನ್ನೊಂದನ್ನು ಅಡ್ಡಲಾಗಿ ಇಡಲಾಗಿದೆ. ಅದು ಕೀಟ್ಸ್‌ನ ಓದುವ ಭಂಗಿಯಾಗಿತ್ತೆಂದು ಬರೆಯಲಾಗಿದೆ. ಅಲ್ಲಿಯೇ ಕವಿಯ ಅಮರಗೀತೆಯಾದ 'ಏನ್ ಓಡ್ ಟು ಅ ನೈಟಿಂಗೇಲ್'ನ ಚಿತ್ತು ಕಾಟುಗಳಿಂದ ತುಂಬಿರುವ ಹಸ್ತಪ್ರತಿಯ ಭಾವಚಿತ್ರವಿದೆ. ಆ ಕವಿತೆಯ ಕೊನೆಯಲ್ಲಿ ಕವಿ ಸುಖದ ಸಾವಿನ ಕುರಿತು ಬರೆದಿರುವ ಸಾಲುಗಳು ಜಯದ ನಗು ಬೀರುವಂತೆ ಕಾಣುತ್ತವೆ. ಕಪಾಟೊಂದರಲ್ಲಿ ಕೀಟ್ಸ್ ಕವಿಯಾಗುವ ಮುನ್ನ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾಗ ಬಳಸುತ್ತಿದ್ದ ಉಪಕರಣಗಳು ಭಯ ಹುಟ್ಟಿಸುವಂತಿವೆ. ಮೇಲ್ಮಹಡಿಯ ಮಲಗುವ ಕೋಣೆಯಲ್ಲಿ ಕವಿ ಬಳಸಿದ ವಸ್ತುಗಳು, ಮಲಗಿದ ಮಂಚ, ಕುರ್ಚಿ, ಮೇಜು ಎಲ್ಲವುಗಳ ಪ್ರತಿಕೃತಿಗಳಿವೆ. ಮೂಲ ವಸ್ತುಗಳನ್ನು ಸೋಂಕಿನ ಭಯದಿಂದ ಸುಟ್ಟು ನಾಶ ಮಾಡಲಾಗಿದೆ.

ಕವಿಯ ಖಾಸಗಿ ಕೋಣೆಯಲ್ಲಿ ಕಾಲಿಟ್ಟಾಗ ಅವನ ನೋವು, ಯಾತನೆ, ನಿಟ್ಟುಸಿರುಗಳ ಜೊತೆಗೆ ಹರಿಯುವ ಕಾವ್ಯ ಲಹರಿಯ ಅನುರಣನ. ಜಾನ್ ಕೀಟ್ಸ್‌ನ ಕಾವ್ಯದ ಮೂಲ ತತ್ವವೇ ಸೌಂದರ್ಯ. ನಶ್ವರ ಬದುಕು ಮತ್ತು ಅಮರವಾದ ಕಲೆಯ ನಡುವಿನ ಸತತ ಸಂಘರ್ಷ. ಎಂದೂ ನಾಶವಾಗದ ಸೌಂದರ್ಯದ ಅಭಿವ್ಯಕ್ತಿಯ ಮುಂದೆ ಯೌವನ, ಪ್ರೀತಿ, ಖುಷಿ ಮತ್ತು ನೋವು ಎಲ್ಲವೂ ಕ್ಷಣಿಕವೆನಿಸುತ್ತದೆ. ಅವ್ಯಕ್ತವಾಗಿರುವುದನ್ನು, ನಿಗೂಢವಾಗಿರುವುದನ್ನು ಪ್ರತಿರೋಧವಿಲ್ಲದೇ ಒಪ್ಪಿಕೊಳ್ಳುವುದೇ ಬದುಕಿನ ರೀತಿಯಾಗಬೇಕು ಎನ್ನುವುದು ಅವನ ಬಹುತೇಕ ಕವಿತೆಗಳ ತಿರುಳು. ಹಾಗೆಯೇ ಆ ಕೋಣೆಯಲ್ಲಿದ್ದ ಒಂದೇ ಒಂದು ಚಿಕ್ಕ ಕಿಟಕಿಯಿಂದ ಇಣುಕಿದಾಗ ಪಕ್ಕದ ಕಾರಂಜಿಯ ನೀರಿನ ಜುಳುಜುಳು ನಿನಾದದೊಂದಿಗೆ ಮನೆಯ ಮುಂದಿನ ಪ್ಲಮ್ ಮರವೊಂದರಲ್ಲಿ ಕುಳಿತ ನೈಟಿಂಗೇಲ್ ಹಕ್ಕಿ 'ಸೌಂದರ್ಯವೇ ಸತ್ಯ ಮತ್ತು ಸದಾನಂದ' ಎಂಬ ಕೀಟ್ಸ್‌ನ ಅಮರಗೀತೆಯನ್ನು ಹಾಡುತ್ತಿತ್ತು.